<u>ದಿಃ 05-03-2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು: 1 ರಿಂದ 3 ನೇ ಆರೋಪಿತರ ಪರ ವಕೀಲರಾದ ಶ್ರೀ ಎಂ ಜೆ ಎಸ್ ರವರಿಂದ</u>

ಘಟನೆ ನಡೆದಿದೆ ಅಂತ ಹೇಳುವ ಸ್ಥಳದಿಂದ ನಾನು ವಾಸ್ತವ್ಯ ಮಾಡಿಕೊಂಡ ಗ್ರಾಮದಿಂದ ಅಂದಾಜು 25 ಕಿ.ಮೀ. ದೂರದಲ್ಲಿದೆ. ಘಟನಾ ಸ್ಥಳಕ್ಕೆ 10 ಜನ ಕೆಲಸಗಾರರನ್ನು ಬೇಲಿ ಹಾಕಲು ಕರೆದುಕೊಂಡು ಹೋಗಿದ್ದೆ. ಸದ್ರಿ ವ್ಯಕ್ತಿಗಳನ್ನು ಸ್ಥಳಕ್ಕೆ ಕರೆದುಕೊಂಡು ಬರಲು ಟಿ ಟಿ ವಾಹನವನ್ನು ಬಳಸಿದ್ದೆವು ಅದನ್ನು ಚಾಸಾ.3 ರವರು ಬಾಡಿಗೆಗೆ ಪಡೆದುಕೊಂಡಿದ್ದರು. ಸದ್ರಿ ವಾಹನ ಬೆಂಗಳೂರಿನಲ್ಲಿ ನೊಂದಣಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಘಟನೆ ನಡೆಯುವ ಪೂರ್ವದಲ್ಲಿ ನಾನು ಮತ್ತು ಚಾಸಾ,3 ಚಂದ್ರಶೇಖರ ಗುಲ್ವಾಡಿ ದಲಿತ ಸಂಘರ್ಷ ಸಮಿತಿ ಭೀಮಾವಾದ ಈ ಸಂಘಟನೆಯಲ್ಲಿ ಜಿಲ್ಲಾ ಮಟ್ಟದ ಪದಾಧಿಕಾರಿಗಳಾಗಿದ್ದೆವು ಎಂದರೆ ಸರಿ. ಚಾಸಾ.1 ಸತೀಶ್ ರವರು ಸಹಾ ಸದ್ರಿ ಸಂಘಟನೆಯ ಪದಾಧಿಕಾರಿಯಾಗಿದ್ದರು ಎಂದರೆ ಸರಿ. ನಾನು, ಚಾಸಾ.1 ಮತ್ತು ಚಾಸಾ.3 ರವರು ಆತ್ಮೀಯರು ಮತ್ತು ಸ್ನೇಹಿತರು ಎಂದರೆ ಸಾಕ್ಷಿ ಆತ್ಮೀಯರಲ್ಲ ಆದರೆ ಸ್ನೇಹಿತರು ಅಂತ ನುಡಿಯುತ್ತಾರೆ.

ನಾವು ಸ್ಥಳಕ್ಕೆ ಹೋಗುವಾಗ ಸ್ಥಳದ ಅಳತೆ ಆಗಿರಲಿಲ್ಲ. ನಾವು ಬೆಳಗಿನ 10 ಗಂಟೆಗೆ ಸ್ಥಳಕ್ಕೆ ಮುಟ್ಟಿದ್ದೆವು. ನಾವು ಹೋದ ಅರ್ಧ ಗಂಟೆ ನಂತರ ಸರ್ವೇಯವರು ಸ್ಥಳಕ್ಕೆ ಬಂದಿರುತ್ತಾರೆ. ಬೇಲಿ ಹಾಕಲು ಬೇಕಾದ ಸಾಮಾಗ್ರಿಗಳಾದ ಹಾರೆ, ಪಿಕ್ಕಾಸೆ ಇತ್ಯಾದಿಗಳನ್ನು ನಾವು ವಾಹನದಲ್ಲೇ ತೆಗೆದುಕೊಂಡು ಹೋಗಿದ್ದೆವು. ನಾವು ಸ್ಥಳಕ್ಕೆ ಹೋದ ತಕ್ಷಣ ಚಾಸಾ.1 ರವರು ಸರಿಗೆ ಬೇಲಿ ಮತ್ತು ಕಲ್ಲು ಖಂಬಗಳನ್ನು ಬೇರೆ ವಾಹನದಲ್ಲಿ ತರಿಸಿದ್ದರು ಅದನ್ನು ರಸ್ತೆಯ ಪಕ್ಕದಲ್ಲಿ ಸಂಗ್ರಹಿಸಿ ಇಡಲಾಗಿತ್ತು. ನಾವು ಸ್ಥಳಕ್ಕೆ ಹೋಗುವಾಗ ಅಲ್ಲಿ 10 ರಿಂದ 15 ಜನ ಸೇರಿದ್ದರು. ನಾನು ಸ್ಥಳಕ್ಕೆ ಹೋದಾಗ ಯಾವುದೇ ಗಲಾಟೆ ಆರಂಭವಾಗಿರಲಿಲ್ಲ.

ಸರ್ವೇಯವರಿಗೆ ನ್ಯಾಯಾಲಯದಲ್ಲಿ ದಾವೆ ಬಾಕಿ ಇದೆ ಜಾಗದ ಅಳತೆ ಮಾಡಲು ನಮ್ಮ ಆಕ್ಷೇಪ ಇದೆ ಅಂತ 1 ನೇ ಆರೋಪಿ ತಿಳಿಸಿದರು. ಸರ್ವೇಯರಿಗೆ ನ್ಯಾಯಾಲಯದ ಆದೇಶವನ್ನು ಅವರ ಗಮನಕ್ಕೆ ತಂದಿದ್ದಾರೋ ಇಲ್ಲವೋ ಅಂತ ನನಗೆ ಗೊತ್ತಿಲ್ಲ. ಸರ್ವೇಯವರು ಅಳತೆ ಮಾಡಲಿಕ್ಕೆ ಸಾಧ್ಯವಿಲ್ಲ ಅಂತ ಸ್ಥಳದಿಂದ

ಹೋಗಿರುತ್ತಾರೆ. ಫಿರ್ಯಾದಿದಾರ ನಮಗೆ ಅಳತೆ ಮಾಡಲು ಆಗಿಲ್ಲ ಆ ಕಾರಣಕ್ಕೆ ಬೇಲಿ ಹಾಕಲು ಆಗುವುದಿಲ್ಲ ಅಂತ ತಿಳಿಸಿದರು. ಆಗ ನಾನು, ಚಾಸಾ.3 ಮತ್ತು ನಮ್ಮ ಕೆಲಸದವರು ನಾವು ಹೋದ ವಾಹನದಲ್ಲೇ ವಾಪಾಸು ಬಂದಿರುತ್ತೇವೆ.

ಘಟನೆ ಆದ 9 ದಿನದ ನಂತರ ಪೋಲೀಸರು ನನ್ನ ವಿಚಾರಣೆ ಮಾಡಿರುತ್ತಾರೆ. ಪೋಲೀಸರಿಗೆ ನಾನು ಈಗ ಸಾಕ್ಷ್ಯದಲ್ಲಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ. ನಾವು ಬರುವಾಗ ಸರಿಗೆ ಬೇಲಿ ಮತ್ತು ಕಲ್ಲು ಖಂಬ ಸ್ಥಳದಲ್ಲೇ ಇತ್ತು. ಸತೀಶ್ ಕಂಚಗೋಡು ರವರು ಯಾವ ಆಸ್ತಿ ಯಾರಿಂದ ಖರೀದಿ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ಆದಂತಹಾ ದಾಖಲಾತಿ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಬೇಲಿ ಹಾಕಲು ಬೇಕಾದ ಸಲಕರಣೆಗಳನ್ನು ನಾನು ತಂದಿದ್ದೇನೆ ಅಂತ ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ. ನಾವು ಸ್ಥಳಕ್ಕೆ ಹೋದಾಗ ಆ ಸ್ಥಳದ ಅಕ್ಕ ಪಕ್ಕದ ಮಾಲೀಕರ ಪರಿಚಯ ನನಗೆ ಇಲ್ಲಾ. ಆದರೆ ಸ್ಥಳದಲ್ಲಿ ನಾನು ಸುಬ್ರಾಯ ಶೇರೆಗಾರ್ ರವರನ್ನು ನೋಡಿದ್ದೇನೆ. ನಾವು ಬೇಲಿ ಹಾಕಲು ಹೋದಂತಹಾ ಜಾಗದ ಯಾವ ದಿಕ್ಕಿನಲ್ಲಿ ಸುಬ್ರಾಯ ಶೇರೆಗಾರ್ ರವರ ಜಾಗ ಇತ್ತೆಂದು ನನಗೆ ಗೊತ್ತಿಲ್ಲ. ಸುಬ್ರಾಯ ಶೇರೆಗಾರ್ ಮತ್ತು ಇತರೇ ಆರೋಪಿತರು ನನಗೆ ವೈಯುಕ್ತಿಕ ಪರಿಚಿತರಲ್ಲ. ನಾನು ಕೆಲಸಕ್ಕೆ ಕರೆದುಕೊಂಡು ಹೋದಂತಹಾ ವ್ಯಕ್ತಿಗಳು ಕುಂದಾಪುರ ಗಾಂಧೀ ಮೈದಾನದ ಹತ್ತಿರ ಇರುವ ಕೂಲಿಯಾಳುಗಳು. ಅವರ ಪೈಕಿ 2 ರಿಂದ 3 ಜನ ನಮ್ಮ ಗುಲ್ವಾಡಿ ಊರಿನವರು. ಗುಲ್ವಾಡಿಯಿಂದ ಕರೆದುಕೊಂಡು ಹೋದ ವ್ಯಕ್ತಿಗಳ ಪರಿಚಯ ನನಗೆ ಇಲ್ಲಾ. ಅವರಲ್ಲಿ ಸುಕೇಶ್ ಎನ್ನುವವನ ಪರಿಚಯ ಇದ್ದು ಅವನು ನಮ್ಮ ಸಮುದಾಯದವನು. ಉಳಿದವರ ಪರಿಚಯ ಇಲ್ಲಾ ಮತ್ತು ಅವರು ಯಾವ ಸಮುದಾಯದವರು ಎಂದು ನನಗೆ ಗೊತ್ತಿಲ್ಲ. ನನಗೆ ಗಾಂಧೀ ಮೈದಾನದ ಹತ್ತಿರ ಇರುವ ವ್ಯಕ್ತಿಗಳ ವೈಯುಕ್ತಿಕ ಪರಿಚಯ ಇಲ್ಲಾ ಮತ್ತು ಆ ಬಗ್ಗೆ ಪೋಲೀಸರಿಗೆ ಹೇಳಿಲ್ಲ. ಪೋಲೀಸರು ನನಗೆ ನಾನು ಕರೆದುಕೊಂಡು ಹೋದ ವ್ಯಕ್ತಿಗಳು ಯಾವ ಜಾತಿಯವರು ಅಂತ ನನಗೆ ಕೇಳಿಲ್ಲ ಅದರಂತೆ ನಾನು ಅವರಿಗೆ ಕೆಲಸಕ್ಕೆ ಕರೆದುಕೊಂಡು ಹೋದಂತಹಾ ವ್ಯಕ್ತಿಗಳು ಯಾವ ಜಾತಿಯವರು ಅಂತ ತಿಳಿಸಿಲ್ಲ. ನಾನು ಪೋಲೀಸರಿಗೆ ಹೇಳಿಕೆ

ಕೊಡುವಾಗ ನಾನು ಕರೆದುಕೊಂಡು ಹೋದ ಕೆಲಸಗಾರರು ಎಸ್ ಸಿ ಎಸ್ ಟಿ ಜಾತಿಗೆ ಸೇರಿದವರಾಗಿದ್ದು ಅವರಿಗೆ ಆರೋಪಿತರು ಬೈದಿದ್ದಾರೆ ಅಂತ ತಿಳಿಸಿರುತ್ತೇನೆ. ಸಾಕ್ಷಿ ಪುನಃ ಪೋಲೀಸರು ನನಗೆ ನಾನು ಕರೆದುಕೊಂಡು ಹೋದ ವ್ಯಕ್ತಿಗಳು ಯಾವ ಜಾತಿಗೆ ಸೇರಿದ್ದರು ಅಂತ ವಿಚಾರಿಸಿಲ್ಲ ಅಂತ ನುಡಿಯುತ್ತಾರೆ. ನಾವು ಬೇಲಿ ಹಾಕಲು ಹೊದಂತಹಾ ಸ್ಥಳದ ಯಾವ ದಿಕ್ಕಿಗೆ ನಾನು ಹೇಳಿದಂತಹಾ ರಸ್ತೆ ಇದೆ ಅಂತ ಹೇಳಲಿಕ್ಕೆ ಬರುವುದಿಲ್ಲ. ಸದ್ರಿ ರಸ್ತೆ ಮಣ್ಣಿನ ರಸ್ತೆಯಾಗಿದ್ದು ಅದು ಎಲ್ಲಿಂದ ಎಲ್ಲಿಗೆ ಹೋಗುತ್ತದೆ ಅಂತ ಗೊತ್ತಿಲ್ಲ. ನಾನು ಚಾಸಾ.1 ರಿಂದ 3 ರವರು ಸೇರಿಕೊಂಡು ರವೀಂದ್ರ ಶೇರೆಗಾರ್ ಇವರ ನಿರ್ದೇಶನದಂತೆ ಆರೋಪಿತರ ಪಟ್ಟಾ ಸ್ಥಳಕ್ಕೆ ಬೇಲಿ ಹಾಕಲು ಹೋಗಿದ್ದೆವು ಎಂದರೆ ಸರಿ ಅಲ್ಲಾ. ರವೀಂದ್ರ ಶೇರೆಗಾರ್ ನನ್ನನ್ನು ಮತ್ತು ನನ್ನ ತಂಡದವರನ್ನು ಹಣ ಕೊಟ್ಟು ಬೇಲಿ ಹಾಕಲು ಬರಲು ತಿಳಿಸಿದ್ದ ಎಂದರೆ ಸರಿ ಅಲ್ಲಾ. ಸತೀಶ್ ಕಂಚಗೋಡು ಆಗಲೀ ಚಾಸಾ.2 ರವೀಂದ್ರ ದೊಂಬೆ ನಮಗೆ ನಾವು ಬೇಲಿ ಹಾಕಲು ಹೋದಂತಹಾ ಸ್ಥಳ ಆರೋಪಿತರದ್ದು ಮತ್ತು ಅದಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ತಡೆಯಾಜ್ಞೆ, ವ್ಯಾಜ್ಯ ಇದ್ದ ಬಗ್ಗೆ ತಿಳಿಸಿಲ್ಲ. ನಾನು ಚಾಸಾ,1 ಮತ್ತು 3 ರವರು ಸೇರಿಕೊಂಡು ನಮ್ಮ ಜಾತಿ ಹೆಸರನ್ನು ದುರುಪಯೋಗಪಡಿಸಿಕೊಂಡು ಬೇರೆಯವರಿಂದ ಹಣ ಪಡೆದು ಬೇರೆಯವರ ಸ್ಥಳಕ್ಕೆ ತೊಂದರೆ ಮಾಡುವಂತಹಾ ಹವ್ಯಾಸ ಇದ್ದವರೆಂದರೆ ಸರಿ ಅಲ್ಲಾ. ನಾನು ಚಾಸಾ.2 ರವೀಂದ್ರ ದೊಂಬೆ ರವರಿಂದ ಹಣ ಪಡೆದುಕೊಂಡು ಸ್ಥಳಕ್ಕೆ ಜನರನ್ನು ಕರೆದುಕೊಂಡು ಗಲಾಟೆ ಮಾಡಲು ಹೋಗಿದ್ದೆ ಅದಕ್ಕೆ ಆರೋಪಿತರು ಅವಕಾಶ ಕೊಡದೇ ಇದ್ದಿದ್ದರಿಂದ ಅವರ ವಿರುದ್ಧ ನಾವೆಲ್ಲಾ ಸುಳ್ಳು ಪ್ರಕರಣ ದಾಖಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ. ನಾನು, ಚಾಸಾ1 ಮತ್ತು ಚಾಸಾ.3 ಹಾಗೂ ನಾನು ಕರೆದುಕೊಂಡು ಹೋದಂತಹಾ ಜನ ಯಾವ ಜಾತಿಗೆ ಸೇರಿದವರೆಂದು ಆರೋಪಿತರಿಗೆ ಗೊತ್ತಿಲ್ಲ ಎಂದರೆ ಸರಿ ಅಲ್ಲಾ. ಆರೋಪಿತರಿಗೆ ತೊಂದರೆ ಮಾಡುವ ಉದ್ದೇಶದಿಂದ ನಾವು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿ ಅಲ್ಲಾ. ಆರೋಪಿತರು ನನ್ನ ಸಮಕ್ಷಮ ಸತೀಶ್ ಕಂಚಗೋಡು ಮತ್ತು ನನ್ನ ಮತ್ತು ನನ್ನ ಜೊತೆಗೆ ಹೋದ ಜನರಿಗೆ ಜಾತಿ ಅವಾಚ್ಯ ಶಬ್ದದಿಂದ ಬೈದು ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿ ಅಲ್ಲಾ. ನಾನು ಹೇಳಿದಂತೆ

ಯಾವುದೇ ಘಟನೆ ಆಗಿಲ್ಲ ಎಂದರೆ ಸರಿ ಅಲ್ಲಾ. ನನ್ನ ಸಮಕ್ಷಮ ಆರೋಪಿತರು ನನ್ನನ್ನಾಗಲೀ ನಾನು ಕರೆದುಕೊಂಡು ಹೋದ ಜನರಿಗಾಗಲೀ ಸತೀಶ್ ಕಂಚಗೋಡು ಇವರಿಗಾಗಗೀ ಚಾಸಾ.2 ರವೀಂದ್ರ ದೊಂಬೆ ಇವರಿಗೆ ಜೀವ ಧಮಿಕಿ ಹಾಕಿಲ್ಲ ಎಂದರೆ ಸರಿ ಅಲ್ಲಾ.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**